# ಆತ್ಮಹತ್ಯೆಯನ್ನು ಮೆಟ್ಟಿನಿಂತ ವೀರನಾರಿಯರು

ಪಿ.ಸಾಯಿನಾಥ್

## ಅಪರಾಧಿಯೆ ಧನ್ಯ !

ತನಗೆ ಕೆಲಸ ಸಿಕ್ಕಿದ ದಿನಗಳಂದು(ಅರ್ಥಾತ್ ಕೆಲಸ ಸಿಗದ ದಿನಗಳೂ ಹಲವಾರು!–*ಸಂ*), ೧೨ ಗಂಟೆಗಳ ಪರಿಶ್ರಮದ ನಂತರವೂ ಜಯಲಕ್ಷ್ಮಮ್ಮನಿಗೆ ಸಿಕ್ಕುವ ಅಕ್ಕಿಯ ಪ್ರಮಾಣ, ಜೈಲಿನಲ್ಲಿರುವ ಒಬ್ಬ ಅಪರಾಧಿಗೆ ಸಿಗುವ ನಾಲ್ಕನೆಯ ಒಂದಂಶಕ್ಕಿಂತಲೂ ಕಡಿಮೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಇಡೀ ದಿನ ಆಕೆಗೆ ಸಿಗುವ ಸರಾಸರಿ ಅಕ್ಕಿ, ಒಬ್ಬ ಕೈದಿಗೆ ಒಪ್ಪತ್ತಿನಲ್ಲಿ ಸಿಗುವ ಆಹಾರಕ್ಕಿಂತಲೂ ಬಹಳ ಕಡಿಮೆ. ಹಾಗೆಂದು, ಜಯಲಕ್ಷ್ಮಮ್ಮನನ್ನು ಜೈಲಿನಲ್ಲಿರುವ ಅಪರಾಧಿಯೆಂದು ತಿಳಿಯಬೇಡಿ. ನಾಲ್ಕು ವರ್ಷಗಳ ಹಿಂದೆ ಮಂಡ್ಯ ಜಿಲ್ಲೆಯ ಹುಲಗನಹಳ್ಳಿ ಗ್ರಾಮದಲ್ಲಿ ಆತ್ಮಹತ್ಯೆ ಮಾಡಿಕೊಂಡ ೪೫ ವರ್ಷ ವಯಸ್ಸಿನ ಹೆಚ್.ಎಂ.ಕೃಷ್ಣನ ಹೆಂಡತಿಯಾದ ಆಕೆ ಒಬ್ಬ ಸಾಮಾನ್ಯ ಬೇಸಾಯಗಾರ್ತಿ. ೨೦೦೩ ರಲ್ಲಿ ಕರ್ನಾಟಕದಲ್ಲಿ ಕೃಷಿಗೆ ಸಂಬಂಧಿಸಿದ ಆತ್ಮಹತ್ಯೆ ಪ್ರಕರಣಗಳಲ್ಲಿ, ಮಂಡ್ಯ ಜಿಲ್ಲೆಯೆ ಎಲ್ಲಕ್ಕಿಂತ ಹೆಚ್ಚಾಗಿ ಬಾಧಿತವಾಗಿತ್ತು. ಕರ್ನಾಟಕ ರಾಜ್ಯದಲ್ಲಿ ಆಕೆಯು ಬಿ.ಪಿ.ಎಲ್. (Below the Poverty Line) – ಬಡತನದ ರೇಖೆಯ ಕೆಳಗಿರುವವರಿಗೆ ಕೊಡಲಾಗುವ ರೇಷನ್ ಕಾರ್ಡ್‌ನಿಂದ ಆಕೆಗೆ ಒಂದು ತಿಂಗಳಿಗೆ ಸಿಗುವುದು ನಾಲ್ಕು ಕೆ.ಜಿ ಅಕ್ಕಿ ಮತ್ತು ಒಂದು ಕೆ.ಜಿ ಗೋಧಿ ಮಾತ್ರ, ಆ ನಾಲ್ಕು ಕೆ.ಜಿ ಅಕ್ಕಿಗೆ ಸರ್ಕಾರವು ಅನುದಾನ ನೀಡುತ್ತಿರುವುದು ನಿಜವೇ. ಆದರೆ, ಚಾಲ್ತಿಯಲ್ಲಿರುವ ಮಾರುಕಟ್ಟೆಯ ಬೆಲೆಯನ್ನು ನೋಡಿದರೆ ಆಕೆಗೆ ಮುಕ್ತ ಮಾರುಕಟ್ಟೆಯಲ್ಲಿ ಅದಕ್ಕಿಂತಲೂ ಹೆಚ್ಚಿಗೆ ಅಕ್ಕಿ ಕೊಳ್ಳುವ ಆರ್ಥಿಕ ಶಕ್ತಿಯಿಲ್ಲ. ಇವಳದೇನೂ ವಿರಳ ಪ್ರಸಂಗವಲ್ಲ. ಕಳೆದ ೧೪ ವರ್ಷಗಳಲ್ಲಿ, ಭಾರತದಾದ್ಯಂತ ಕೃಷಿಸಂಬಂಧಿತ ಆತ್ಮಹತ್ಯೆ ಪ್ರಕರಣಗಳಲ್ಲಿ, ಗಂಡಂದಿರನ್ನು ಕಳೆದುಕೊಂಡ ಒಂದು ಲಕ್ಷಕ್ಕೂ ಹೆಚ್ಚಿನ ಮಹಿಳೆಯರಲ್ಲಿ ಈಕೆಯೂ ಒಬ್ಬಳು, ಅಷ್ಟೆ.

"ಒಂದು ತಿಂಗಳಿಗೆ ನಾಲ್ಕು ಕೆ.ಜಿ. ಎಂದರೆ, ದಿನಕ್ಕೆ ೧೩೫ ಗ್ರಾಂ ಆಯಿತು" ಎನ್ನುತ್ತಾರೆ, ಅದೇ ಜಿಲ್ಲೆಯ ರೈತ ಕುಟುಂಬದಿಂದ ಬಂದ ಟಿ. ಯಶವಂತ. ಅವರು ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾದ ಕರ್ನಾಟಕ ರಾಜ್ಯ ಘಟಕದ ಉಪಾಧ್ಯಕ್ಷರೂ ಹೌದು. "ಒಬ್ಬ ಆಪಾದಿತನಿಗೆ ಅಥವಾ ಅಪರಾಧಿಗೆ ಇದಕ್ಕಿಂತ ಹೆಚ್ಚಿಗೆ ರೇಷನ್ ಸಿಗುತ್ತದೆ" ಎನ್ನುತ್ತಾರೆ ಅವರು. ಅಷ್ಟೇ ಅಲ್ಲ, ಅವರಿಗೆ ಬೇಯಿಸಿದ ಅನ್ನವೇ ಸಿಗುತ್ತದೆ. ಆದರೆ ನಮ್ಮ ಜಯಲಕ್ಷ್ಮಮ್ಮನಿಗೆ ಸಿಕ್ಕುವುದು ಕೇವಲ ನಾಲ್ಕು ಕೆ.ಜಿ. ಅಕ್ಕಿ ಮಾತ್ರ.

ಕರ್ನಾಟಕ ರಾಜ್ಯದ ಜೈಲುಗಳ ಆಹಾರದ ಪ್ರಮಾಣದಲ್ಲಿ ವಿವಿಧತೆ ಇದೆ. ಒಬ್ಬ ಕೈದಿ ಅನ್ನವನ್ನು ಇಷ್ಟಪಟ್ಟರೆ ಅವನಿಗೆ ಹೆಚ್ಚು ಅನ್ನ ಸಿಗುತ್ತದೆ, ಇನ್ನೊಬ್ಬ ರಾಗಿ ಮುದ್ದೆ ಇಷ್ಟಪಟ್ಟರೆ ಹೆಚ್ಚು ರಾಗಿ ಮುದ್ದೆ, ಮತ್ತೊಬ್ಬ ಚಪಾತಿ ಇಷ್ಟಪಟ್ಟರೆ ಹೆಚ್ಚು ಚಪಾತಿ. ಬೆಂಗಳೂರಿನ ಜೈಲಿನ ಅಧಿಕಾರಿಗಳು 'ದಿ ಹಿಂದೂ' ಪತ್ರಿಕೆಗೆ ನೀಡಿರುವ ಮಾಹಿತಿ ಪ್ರಕಾರ ಜೈಲಿನ ಆಹಾರ ಪಡಿತರ ಹೀಗಿರುತ್ತದೆ: " ಕಠಿಣ ಸಜೆಗೆ ಗುರಿಯಾದರು, ಅವರು ಅನ್ನ ಊಟ ಮಾಡುವವರಾದರೆ, ಒಂದು ಹೊತ್ತಿನ ಊಟದಲ್ಲಿ ೭೧೦ ಗ್ರಾಂ ಅನ್ನ ಪಡೆಯುತ್ತಾರೆ. ಅನ್ನವಲ್ಲದೆ ಬೇರೆ ಆಹಾರವನ್ನೂ ತೆಗೆದುಕೊಳ್ಳುವವರಿಗೆ ೨೯೦ ಗ್ರಾಂ ಅನ್ನ ಸಿಗುತ್ತದೆ. ವಿಚಾರಣಾಧೀನರಿಗೆ ಹಾಗೂ ಸಾಮಾನ್ಯ ಶಿಕ್ಷೆಗೆ ಗುರಿಯಾದವರಿಗೆ, (ಅನ್ನವನ್ನು ತಿನ್ನುವವರಾದರೆ) ಒಂದು ಹೊತ್ತಿಗೆ ೫೦೫ ಗ್ರಾಂ ಅನ್ನ ಸಿಗುತ್ತದೆ."

ಕಠಿಣ ಶಿಕ್ಷೆಗೆ ಗುರಿಯಾದ ಒಬ್ಬ ಅಪರಾಧಿ ದಿವಸಕ್ಕೆ ೮ ಗಂಟೆ ದುಡಿಯುತ್ತಾನೆ. ಜಯಲಕ್ಷ್ಮಮ್ಮ ದುಡಿಯುವುದು ೧೨ ಗಂಟೆಗಳು ಅಥವಾ ಇನ್ನೂ ಹೆಚ್ಚು. "ಆದರೆ ಆಕೆಗೆ ದಿವಸದಲ್ಲಿ ಮೂರು ಹೊತ್ತು ಊಟ ಮಾಡಿದರೆ, ಪ್ರತಿ ಊಟಕ್ಕೆ ಕೇವಲ ೪೫ ಗ್ರಾಂ ಅನ್ನ ಸಿಕ್ಕಿದಂತಾಯಿತು" ಎನ್ನುತ್ತಾರೆ ಶ್ರೀ ಯಶವಂತ್. ಪಾಪ, ಆಕೆಗೆ ಈ ಪರಿಸ್ಥಿತಿಗಳನ್ನು ಹೋಲಿಸಿ ನೋಡುವಷ್ಟು ಸಮಯವೂ ಇಲ್ಲ, ವ್ಯವಧಾನವೂ ಇಲ್ಲ. ಆಕೆಯ ಮಗಳು ಈಗ ಬೆಂಗಳೂರಿನ ಒಂದು ಬಟ್ಟೆ ಕಂಪನಿಯೊಂದರಲ್ಲಿ ಅತ್ಯಂತ ಕಡಿಮೆ ಸಂಬಳಕ್ಕೆ ದುಡಿಯುತ್ತಿದ್ದಾಳೆ. ಅವಳು ದುಡಿಯುವುದು ಅವಳ ಹೊಟ್ಟೆ ಹೊರೆದುಕೊಳ್ಳುವುದಕ್ಕೆ ಮಾತ್ರ ಸಾಕು. "ಹೆಚ್ಚೆಂದರೆ ವರ್ಷಕ್ಕೆ ೫೦೦ ರೂಪಾಯಿಗಳನ್ನು ಅವಳು ಕಳಿಸುತ್ತಾಳೆ", ಎನ್ನುತ್ತಾರೆ ಜಯಲಕ್ಷ್ಮಮ್ಮ. ಮನೆಯಲ್ಲಿ ಇರುವುದು ಆಕೆ,

[ಯುವಕನೊಬ್ಬನು ತನ್ನ ಕೊಠಡಿಯ ಬಾಗಿಲುಗಳನ್ನೆಲ್ಲಾ ಮುಚ್ಚಿ ದೇವರಿಗಾಗಿ ಧ್ಯಾನ ಮಾಡಿಯೂ ಏನೂ ಪ್ರಯೋಜನವಾಗಲಿಲ್ಲವೆಂದಾಗ ಸ್ವಾಮಿಜೀಯವರು ಹೀಗೆನ್ನುತ್ತಾರೆ:]

ವತ್ಸ, ನನ್ನ ಮಾತಿಗೆ ನೀನೇನಾದರೂ ಬೆಲೆ ಕೊಡುವುದಾದರೆ ನಾನು ನಿನಗೆ ಹೇಳುವುದಿಷ್ಟೆ. ಮೊದಲು ನಿನ್ನ ಕೊಠಡಿಯ ಬಾಗಿಲುಗಳನ್ನೆಲ್ಲಾ ತೆರೆದು ಕಣ್ಣುಬಿಟ್ಟು ಹೊರಗೆ ನೋಡು. ನಿನ್ನ ನೆರೆ ಹೊರೆಯಲ್ಲಿ ಬಹಳಷ್ಟು ಜನರು ದುಃಖದಾರಿದ್ರ್ಯದಲ್ಲಿ ಮುಳುಗಿದ್ದಾರೆ. ಅವರಲ್ಲಿಗೆ ನೀನು ಹೋಗಿ ಶಕ್ತ್ಯುತ್ಸಾಹಗಳಿಂದ ಅವರ ಸೇವೆಯನ್ನು ಮಾಡಬೇಕು. ರೋಗಿಗಳಿಗೆ ಔಷಧಿವಿತರಣೆಯ ವ್ಯವಸ್ಥೆಯನ್ನು ಮಾಡಿ ಅವರಿಗೆ ಆದಷ್ಟೂ ಉಪಚಾರ ಮಾಡು. ಹೊಟ್ಟೆಗಿಲ್ಲದವರಿಗೆ ಅನ್ನದಾನ ಮಾಡು ; ನಿರಕ್ಷರಕುಕ್ಷಿಗಳಿಗೆ ನಿನಗೆ ಗೊತ್ತಿರುವಷ್ಟು ವಿದ್ಯಾದಾನ ಮಾಡು. ನಿನ್ನ ಸಹೋದರರಿಗೆ ಈ ರೀತಿ ಸೇವೆ ಮಾಡಲು ಪ್ರಾರಂಭಿಸಿದರೆ, ನಿನಗೆ ಖಂಡಿತ ಶಾಂತಿಸಮಾಧಾನಗಳು ದೊರಕುತ್ತವೆ ಎಂದು ಹೇಳಬಲ್ಲೆ.

(ಸ್ವಾಮಿ ವಿವೇಕಾನಂದರ ದಿವ್ಯಸ್ಮೃತಿ)

> ಭಾರತವರ್ಷದಲ್ಲಿರುವ ದೌರ್ಭಾಗ್ಯಕ್ಕೆಲ್ಲ ಮೂಲ ಅಲ್ಲಿರುವ ಬಡಜನರ ಸ್ಥಿತಿ. ಪಾಶ್ಚಾತ್ಯ ದೇಶಗಳಲ್ಲಿ ಬಡವರು ಪಿಶಾಚಿಗಳಂತೆ. ಅವರೊಂದಿಗೆ ಹೋಲಿಸಿದರೆ ನಮ್ಮ ಬಡವರು ದೇವತೆಗಳು. ಆದುದರಿಂದಲೇ ಅವರನ್ನು ಉದ್ಧಾರ ಮಾಡುವುದು ಸುಲಭ. ಹೀನಸ್ಥಿತಿಯಲ್ಲಿರುವ ನಮ್ಮ ಬಡವರಿಗೆ ನಾವು ಮಾಡಬೇಕಾದ ಮುಖ್ಯ ಕರ್ತವ್ಯವೆ, ಅವರಿಗೆ ವಿದ್ಯೆಯನ್ನು ಕೊಟ್ಟು, ಅವರು ಕಳೆದುಕೊಂಡಿರುವ ತಮ್ಮತನವನ್ನು ಅವರಿಗೆ ಮರಳಿಸಬೇಕು.
>
> -ಸ್ವಾಮಿ ವಿವೇಕಾನಂದ (ಕೃ.ಶ್ರೀ.೪.೧೪೭)

ಮತ್ತವಳ ಮಗ ಇಬ್ಬರೇ. ಅವರಿಬ್ಬರಿಗೂ ಸೇರಿಸಿ ಬಿ.ಪಿ.ಎಲ್. ಕಾರ್ಡ್‌ನಿಂದ ದಿನವೊಂದಕ್ಕೆ ೨೭೦ ಗ್ರಾಂ ಸಿಕ್ಕುತ್ತದಷ್ಟೆ. ಅಂದರೆ, ಅವರಿಬ್ಬರಿಗೂ, ರಾಗಿಯನ್ನು ಮುಖ್ಯ ಆಹಾರ ಮಾಡಿಕೊಂಡು ಉಣ್ಣುವ ಒಬ್ಬ ಕೈದಿಗೆ ಸಿಕ್ಕುವ ಅನ್ನಕ್ಕಿಂತ (೨೯೦ ಗ್ರಾಂ) ಕಡಿಮೆಯೆ ಸಿಗುತ್ತದೆ ಎಂದಾಯಿತು.

ಶ್ರೀ ಕೃಷ್ಣ ಅವರು ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಅವರಿಗೆ ಸ್ವಂತ ಜಮೀನು ಒಂದು ೦.೪ ಎಕರೆ, ಭೋಗ್ಯ ಹಾಕಿಕೊಂಡ ಎರಡೆಕರೆ ಜಮೀನು ಇತ್ತು. ೦.೪ ಎಕರೆ ಜಮೀನಿನಲ್ಲಿ ಅವರು ತರಕಾರಿ ಬೆಳೆದುಕೊಂಡಿದ್ದರು. ಇನ್ನೆರಡು ಎಕರೆ ಭೋಗ್ಯದ ಜಮೀನಿನಲ್ಲಿ ರೇಷ್ಮೆ ಇಟ್ಟಿದ್ದರು. ತರಕಾರಿ ಬೆಳೆಗೆ ಬೆಲೆ ಪಾತಾಳಕ್ಕೆ ಕುಸಿಯಿತು! ಒಮ್ಮೆ, ಒಂದು ಕಿಲೋ ಟೊಮೆಟೋಗೆ ಕೇವಲ ಒಂದು ರೂಪಾಯಿ ಆಯಿತು. ಆರು ತಿಂಗಳಿಗೂ ಹೆಚ್ಚು ಕಾಲ ಮಾಡಿದ ವ್ಯವಸಾಯಕ್ಕೆ ಆದ ನೀರಿನ ಖರ್ಚು ೯,೦೦೦ ರೂಪಾಯಿಗಳಷ್ಟಾಗಿದ್ದವು ( ಗಂಟೆಗೆ ೨೦ ರೂ. ನಂತೆ)! ಈಗ ಜಯಲಕ್ಷಮ್ಮನ ಕುಟುಂಬದ ಬಳಿ ಇರುವುದು ಕೇವಲ ೦.೪ ಎಕರೆ ಜಮೀನು. ಕೃಷ್ಣ ಅವರ ಮರಣದ ಬಳಿಕ ಕುಟುಂಬದ ಜಾನುವಾರುಗಳನ್ನೆಲ್ಲ ಮಾರಿಯಾಯಿತು. ಗಂಡ ಮಾಡಿದ ಸಾಲವನ್ನು ಜಯಲಕ್ಷಮ್ಮ ಈಗ ತೀರಿಸುತ್ತಿದ್ದಾರೆ. ಅವರಿಗೆ ಬಂದ ಪರಿಹಾರಧನವೆಲ್ಲ ಇದಕ್ಕೇ ಖರ್ಚಾಗಿ ಹೋಗಿದೆ. "ನನ್ನ ಮಗ ಸಂದೀಪ ಬೇರೆಯವರ ಮೇಕೆಗಳನ್ನು ಮೇಯಿಸಲು ಹೋಗುತ್ತಾನೆ, ಅದಕ್ಕೆ ಯಾವ ದಿನಗೂಲಿಯೂ ಅವನಿಗೆ ಸಿಗುವುದಿಲ್ಲ. ಆದರೆ ಅವುಗಳಿಗೆ ಮರಿಗಳಾದರೆ, ಯಜಮಾನ ಆ ಮರಿಗಳನ್ನು ಸಂದೀಪನಿಗೆ ಕೊಟ್ಟುಬಿಡುತ್ತಾನೆ. ಬಿಡುವಿನ ವೇಳೆಯಲ್ಲಿ ನಾನು ೩೫ ರೂಪಾಯಿಗಳಷ್ಟು ಸಂಪಾದಿಸುತ್ತೇನೆ" ಎನ್ನುತ್ತಾಳೆ ಜಯಲಕ್ಷ್ಮಮ್ಮ. "ಸಂದೀಪ ಓದಬೇಕೆಂದು ನನ್ನ ಆಸೆ. ಆದರೆ ಅವನು ಈಗ ಹತಾಶನಾಗಿದ್ದಾನೆ. ಮೂರು ವರ್ಷಗಳ ಕೆಳಗೆ ಅವನು ಬೆಂಗಳೂರಿಗೆ ಓಡಿ ಹೋಗಿ ಹೋಟಲೊಂದರಲ್ಲಿ ಕೆಲಸಕ್ಕೆ ಸೇರಿದ್ದ. ಅಲ್ಲಿ ಹೋಟಲಿನ ಯಜಮಾನ ಅವನಿಗೆ ತುಂಬಾ ಹೊಡೆಯುತ್ತಿದ್ದ. ಅಲ್ಲಿಂದ ಓಡಿ ಹೋಗಿ ಯಾವುದೋ ಬೇರೆ ರೈಲಿನಲ್ಲಿ ಕುಳಿತು ಮುಂಬೈಗೆ ಹೋಗಿಬಿಟ್ಟಿದ್ದ. ಸ್ವಲ್ಪ ದಿನಗಳ ನಂತರ, ಅವನನ್ನು ಹುಡುಕಿ ಮನೆಗೆ ಕರೆದುಕೊಂಡು ಬಂದಿದ್ದಾಯಿತು," ಎಂದಾಗ ಜಯಲಕ್ಷ್ಮಮ್ಮನ ಮುಖದಲ್ಲಿ ನೋವಿನ ಗೆರೆ ಸ್ಪಷ್ಟವಾಗಿ ಕಾಣುತ್ತಿತ್ತು.

"ಎಲ್ಲ ವಿಧವೆಯರು ಕಷ್ಟಗಳ ಮಧ್ಯೆಯೇ ಜೀವಿಸಬೇಕಾಗುತ್ತದೆ. ಆದರೆ ಇಂತಹ ಕೃಷಿ–ಆಧಾರಿತ ತೊಂದರೆಗಳಿಗೆ ಸಿಕ್ಕಿದವರ ಕಷ್ಟಕ್ಕೆ ಕೊನೆಯೇ ಇಲ್ಲ", ಎನ್ನುತ್ತಾರೆ ಕರ್ನಾಟಕ ರಾಜ್ಯ ರೈತ ಸಂಘದ (ಪುಟ್ಟಣ್ಣಯ್ಯ ಗುಂಪು) ಮಹಿಳಾ ವಿಭಾಗದ ಅಧ್ಯಕ್ಷರಾದ ಸುನಂದಾ ಜಯರಾಮ್, "ತನ್ನ ಗಂಡನನ್ನು ಕಳೆದುಕೊಂಡ ಮೇಲೆಯೂ ಅತ್ತೆ–ಮಾವಂದಿರನ್ನು, ಮಕ್ಕಳನ್ನು ಹಾಗೂ ಜಮೀನನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಈಕೆಯೇ ಹೊರಬೇಕು. ಈಕೆಗೆ ಯಾವುದೇ ಆರ್ಥಿಕ ಸುರಕ್ಷೆ ಇರುವುದಿಲ್ಲ. ಅಷ್ಟೆ ಅಲ್ಲದೆ, ಈಕೆ ತನ್ನ ಗಂಡನ ಸಾಲದ ಹೊರೆಯನ್ನೂ ಹೊರಬೇಕಾಗುತ್ತದೆ. ಈಕೆಯ ಗಂಡನೇನೋ ಜೀವವನ್ನು ಕಳೆದುಕೊಂಡ. ಆದರೆ, ಅದಕ್ಕಾಗಿ ಈಕೆ ತನ್ನ ಜೀವಮಾನವೆಲ್ಲ ಅದರ ಬೆಲೆ ತೆರಬೇಕಾಗಿದೆ", ಎಂದು ಅವರು ಆತ್ಮಹತ್ಯೆ ಮಾಡಿಕೊಂಡ ರೈತರ ಹೆಂಡತಿಯರ ಕಷ್ಟಗಳನ್ನು ನಮ್ಮ ಮುಂದಿಡುತ್ತಾರೆ.

ಬಿದರಹೊಸಹಳ್ಳಿಯ ಚಿಕ್ಕತಾಯಮ್ಮನ ಸ್ಥಿತಿ ಇದಕ್ಕೊಂದು ಉದಾಹರಣೆ. ೨೦೦೩ರಲ್ಲಿ ಆಕೆಯ ಗಂಡ ಹನುಮೇಗೌಡ (ವಯಸ್ಸು ೩೮) ಆತ್ಮಹತ್ಯೆ ಮಾಡಿಕೊಂಡ. ಸ್ವಲ್ಪವೂ ಅಳುಕಿಲ್ಲದೆ ಆಕೆ ಹೇಳುತ್ತಾಳೆ, "ನಮಗೀಗ ಉಳಿದಿರುವುದು ಸಾಲ ಮಾತ್ರ. ನಾವು ದುಡಿಯುವುದೆಲ್ಲವೂ ಸಾಲದ ಮೇಲಿನ ಬಡ್ಡಿಯನ್ನು ತೀರಿಸುವುದರಲ್ಲೇ ಮುಗಿದುಹೋಗುತ್ತದೆ." ಅವಳು ತನ್ನ ಮೂರು ಮಕ್ಕಳನ್ನು ಓದಿಸಲು ಬಹಳ ಕಷ್ಟ ಪಡಬೇಕಾಯಿತು. ಇಲ್ಲದಿದ್ದರೆ ಅವರಿಗೆ ಮುಂದೆ ಓದಲು ಇಷ್ಟವಿದ್ದರೂ ಅರ್ಧಕ್ಕೇ ನಿಲ್ಲಿಸಬೇಕಾಗುತ್ತಿತ್ತು. "ಹೆಣ್ಣುಮಕ್ಕಳೂ ವಿದ್ಯಾಭ್ಯಾಸ ಮಾಡಬೇಕು. ಆದರೆ ನಂತರ, ಅವರ ಮದುವೆಗೂ ಬಹಳ ಹಣವನ್ನು ಕೂಡಿಡಬೇಕಾಗುತ್ತದೆ" ಎನ್ನುತ್ತಾಳೆ ಚಿಕ್ಕತಾಯಮ್ಮ. ಆಕೆಯ ಒಂದು ಹುಡುಗಿ ಶ್ರುತಿ, ಹತ್ತನೆಯ ತರಗತಿ ಪರೀಕ್ಷೆ ಬರೆದಿದ್ದಾಳೆ; ಇನ್ನೊಬ್ಬಳು ಭಾರತಿ ಈಗ ಎರಡನೆಯ ಪಿ.ಯು.ಸಿ ಓದುತ್ತಿದ್ದಾಳೆ. ಮಗ ಹನುಮೇಶ್ ಎಂಟನೆಯ ತರಗತಿ ಓದುತ್ತಿದ್ದಾನೆ. ಅವಳ ಅತ್ತೆ ಹಾಗೂ ಇನ್ನೂ ಕೆಲವು ಸಂಬಂಧಿಕರು ಆಕೆಯ ಮನೆಯಲ್ಲಿದ್ದಾರೆ. ಕಡಿಮೆಯೆಂದರೆ ಐದು ಜನರನ್ನಾದರೂ ಚಿಕ್ಕತಾಯಮ್ಮ ಒಬ್ಬಳೇ ದುಡಿದು ಸಾಕಬೇಕಾಗಿದೆ. "ನಮಗೆ ಇರುವುದು ಕೇವಲ ೧.೫ ಎಕರೆ ಜಮೀನು ಮಾತ್ರ (ಅದರಲ್ಲಿ ಆಕೆ ಮಾವು ಬೆಳೆದಿದ್ದಾಳೆ). ಹೀಗಾಗಿ ಸಾಧ್ಯವಾದಾಗಲೆಲ್ಲ ನಾನು ಕೂಲಿ ಮಾಡಿ ದಿನಕ್ಕೆ ೩೦ ರೂಪಾಯಿಗಳಷ್ಟು ದುಡಿಯುತ್ತೇನೆ. ನನ್ನ ಬಳಿ ಇದ್ದ ಬಿ.ಪಿ.ಎಲ್. ಕಾರ್ಡ್‌ನ್ನು ಅವರು (ಅಧಿಕಾರಿಗಳು) ವಾಪಸು ತೆಗೆದುಕೊಂಡು 'ಇದರ ಬದಲು ಹೊಸ ಕಾರ್ಡ್‌ನ್ನು ಕೊಡುತ್ತೇವೆ' ಎಂದರು. ಆದರೆ ಅದು ಎಂದೂ ಬರಲೇ ಇಲ್ಲ" ಎಂದು ತನ್ನ ದುಃಖವನ್ನು ತೋಡಿಕೊಂಡಳು ಚಿಕ್ಕತಾಯಮ್ಮ. ಶ್ರೀ ಯಶವಂತ ಹೇಳುತ್ತಾರೆ, "ಅದಕ್ಕೆ ಬದಲು ಅವರು ಆಕೆಗೆ ಎ.ಪಿ.ಎಲ್. ಕಾರ್ಡ್‌ನ್ನು (Above

Poverty Line- ಬಡತನ ರೇಖೆಗಿಂತ ಮೇಲಿರುವ ಜನರಿಗೆ ಕೊಡುವ ಕಾರ್ಡ್) ಕೊಟ್ಟರು."

## ಬೆಟ್ಟದಷ್ಟು ಸಾಲ

ಹುಲಿಗೆರೆಪುರದ ಕಾಡೇಗೌಡ (೬೦ ವರ್ಷ) ನಾಲ್ಕು ವರ್ಷದ ಹಿಂದೆ ತನ್ನ ಪ್ರಾಣವನ್ನು ಕಳೆದುಕೊಂಡ. ಈಗ ಆತನ ಪತ್ನಿ ಚೆನ್ನಮ್ಮ ಮತ್ತವಳ ಕುಟುಂಬದ ಮೇಲೆ ೨ ಲಕ್ಷಕ್ಕೂ ಹೆಚ್ಚಿನ ಸಾಲದ ಹೊರೆಯಿದೆ! ಅವನ ಮಗ ಸಿದ್ಧರಾಜ ಹೇಳುತ್ತಾನೆ, " ಕಬ್ಬಿನ ಬೆಳೆ ಹಾಳಾಯಿತು. ಅಪ್ಪ ಮುಳುಗಿಹೋದ." "ನಮಗೆ ಕೇವಲ ಮೂರು ಎಕರೆ ಜಮೀನಿದೆ; ಈಗ ಅದರಿಂದ ನಮ್ಮ ಜೀವನೋಪಾಯವನ್ನು ಗಳಿಸುವುದು ಬಹಳ ಕಷ್ಟ" ಎನ್ನುತ್ತಾಳೆ ಚೆನ್ನಮ್ಮ. ಆದರೂ ಆಕೆ ಹಾಗೂ ಅವಳ ಗಂಡು ಮಕ್ಕಳು ಎಡ ಬಿಡದೆ ದುಡಿದು ಸಾಲ ತೀರಿಸಲು ಪ್ರಯತ್ನಿಸುತ್ತಿದ್ದಾರೆ. ಈ ವರ್ಷ ಅವರು ಬತ್ತ ಬೆಳೆಯುವ ಯೋಜನೆಯನ್ನು ಹಾಕಿಕೊಂಡಿದ್ದಾರೆ.

ಹಲವು ದಶಕಗಳಿಂದ ಬೇಸಾಯವನ್ನೇ ಮಾಡಿಕೊಂಡು ಬಂದಿರುವ, ತೊರೆಶೆಟ್ಟಿ ಹಳ್ಳಿಯ ಶ್ರೀ ಯಶವಂತರ ತಂದೆ ತಮ್ಮಣ್ಣನವರು ಅಭಿಪ್ರಾಯ ಪಡುವಂತೆ, ಕೃಷಿ–ಸಂಬಂಧಿತ ಸಮಸ್ಯೆಗಳು ದಿನೇ ದಿನೇ ಜಟಿಲವಾಗುತ್ತಲೇ ಇವೆ. ಅವರು ಹೇಳುತ್ತಾರೆ, "ಹೆಚ್ಚಿನ ಸಂಖ್ಯೆಯ ಕಬ್ಬು ಬೇಸಾಯಗಾರರು ತಮಗೆ ತಗಲಿದ ಖರ್ಚನ್ನೇ ಹಿಂತಿರುಗಿ ಪಡೆಯಲು ಆಗುತ್ತಿಲ್ಲ. ಕಚ್ಚಾ ಪದಾರ್ಥಗಳ ಬೆಲೆ ಏರುತ್ತಲೇ ಇದೆ, ತಯಾರಾದ ಪದಾರ್ಥಗಳಿಂದ ಬರುವ ಆದಾಯ ಇಳಿಯುತ್ತಲೇ ಇದೆ. ಅಷ್ಟೇ ಅಲ್ಲದೆ, ಕಳೆದ ತಿಂಗಳು ಈ ಹಳ್ಳಿಯಲ್ಲಿ ಸುಮಾರು ನಲವತ್ತು ಕೊಳವೆ ಬಾವಿಗಳನ್ನು ತೋಡಲಾಯಿತು. ಅದರಲ್ಲಿ ಕೇವಲ ಒಂದೇ ಒಂದರಲ್ಲಿ ಮಾತ್ರ ನೀರು ಸಿಕ್ಕಿದೆ. ಹತಾಶರಾದ ಜನರು ಕೈಚೆಲ್ಲಿ ಕೂಡುತ್ತಿದ್ದಾರೆ. ನಾಟಿ ಕಾಲ ಬಂದರೂ ಜಮೀನುಗಳು ಉಳುಮೆ ಇಲ್ಲದೆ ಹಾಗೇ ಬಿದ್ದಿರುವುದನ್ನು ನೀವೇ ಕಣ್ಣಾರೆ ನೋಡಬಹುದು."

ಸ್ವ–ಸಹಾಯ ಗುಂಪುಗಳು ಈ ನಿಟ್ಟಿನಲ್ಲಿ ಏನು ಮಾಡುತ್ತಿವೆ? ಎಂದು ಕೇಳಿದಾಗ ಜಯಲಕ್ಷ್ಮಮ್ಮ ಹೇಳುತ್ತಾರೆ, "ನನಗೆ ಕೊಟ್ಟ ಸಾಲದ ಮೊದಲ ಕಂತನ್ನು ಕಟ್ಟಿದೆ. ಆದರೆ ನಮ್ಮ ಸ್ವ–ಸಹಾಯ ಗುಂಪು ತನ್ನ ಕಾರ್ಯವನ್ನು ಇನ್ನೂ ಪ್ರಾರಂಭಿಸಿಲ್ಲ. ಅದಲ್ಲದೆ, ವಾರಕ್ಕೆ ೨೫ ರೂಪಾಯಿಯನ್ನು ನಾನಂತೂ ಕಟ್ಟಲಾರೆ. ಇನ್ನು ವರ್ಷಕ್ಕೆ ಶೇ. ೨೪ ರಷ್ಟು ಬಡ್ಡಿ ಕಟ್ಟುವುದಂತೂ ದೂರದ ಮಾತು." ಇಂತಹ ನಿಯಮಿತ ಮೊತ್ತವನ್ನು ಕಟ್ಟುವುದು ಚಿಕ್ಕ ತಾಯಮ್ಮನ ಯೋಚನೆಗೂ ಮೀರಿದ್ದು. "ಸ್ವ–ಸಹಾಯ ಗುಂಪಿನ ಯೋಜನೆಯೇನೋ ಒಳ್ಳೆಯದೆ," ಎನ್ನುತ್ತಾರೆ ಕರ್ನಾಟಕ ರಾಜ್ಯ ರೈತ ಸಂಘದ ನಾಯಕರಾದ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ, "ಆದರೆ ಕೆಲವು ಉದಾಹರಣೆಗಳಲ್ಲಿ ಅವರೂ ಬಡ್ಡಿಗೆ ಸಾಲ ಕೊಡುವ ಲೇವಾದೇವಿಯವರಂತೆಯೇ ವರ್ತಿಸುತ್ತಾರೆ. ಸರ್ಕಾರ ವಿಧವೆಯರಿಗಾಗಿ ಮೊದಲು ಮೊದಲು ಸ್ವಲ್ಪ ಪರಿಹಾರ ಕೊಟ್ಟು ಕೈತೊಳೆದುಕೊಂಡಿತು, ಅಷ್ಟೆ. ನಂತರ, ಕೃಷಿ–ಆಧಾರಿತ ಆತ್ಮಹತ್ಯೆಗಳ ಪರಿಣಾಮವಾಗಿ ಅನಾಥರಾದವರ ಕಲ್ಯಾಣಕ್ಕಾಗಿ ಇದುವರೆಗೂ ಯಾವುದೇ ಯೋಜನೆಯನ್ನೂ ಹಾಕಿಕೊಂಡಿಲ್ಲ. ಆ ಬಗ್ಗೆ ಅವರು ಎಂದಾದರೂ ಆಲೋಚಿಸಿದ್ದಾರೇನು?" ಎಂದು ಕೇಳುತ್ತಾರೆ ಅವರು.

ಶ್ರೀಮತಿ ಸುನಂದಾ ಜಯರಾಮ್ ಹೇಳುತ್ತಾರೆ, "ಈ ಹೆಂಗಸರು ಹಾಗೂ ಇವರಂತೆ ಇನ್ನುಳಿದ ಎಲ್ಲ ರೈತ ಮಹಿಳೆಯರು ಎಲ್ಲ ಕಾಲದಲ್ಲೂ, ತಮ್ಮ ತಮ್ಮ ಕುಟುಂಬದ ಪೋಷಣೆಗಾಗಿ ತಾವೇ ಸ್ವತಃ ದುಡಿಯುತ್ತಿದ್ದಾರೆ. ಆದರೂ, ಅವರಿಗೆ ಜಮೀನಿನ ಮೇಲೆ ಯಾವ ಹಕ್ಕೂ ಇಲ್ಲ, ಅವರ ಜಮೀನಿಗೆ ಯಾವ ಸುರಕ್ಷೆಯೂ ಇಲ್ಲ. ಕೃಷಿ ಕೂಲಿಗಾರರಾಗಿ ದುಡಿಯೋಣವೆಂದರೂ ಅವರಿಗೆ ಗಂಡಸರಿಗಿಂತ ಅತ್ಯಂತ ಕಡಿಮೆ ಕೂಲಿ ಸಿಗುತ್ತದೆ. ಆತ್ಮಹತ್ಯಾ ಪ್ರಕರಣಗಳಿಂದ ವಿಧವೆಯಾದವರು ಅಧಿಕ ಒತ್ತಡದ ಬಾಳು ಬಾಳುತ್ತಿದ್ದಾರೆ. ಅವರು ಮಾಡದ ಸಾಲ ಸದಾ ಅವರ ತಲೆಯ ಮೇಲಿನ ಹೊರೆಯಾಗಿರುತ್ತದೆ. ಮದುವೆಗೆ ಬಂದಿರುವ ಹೆಣ್ಣು ಮಕ್ಕಳು ಅವರೊಂದಿಗಿದ್ದಾರೆ. ಹೀಗೆ ಅವರ ಮೇಲಿನ ಒತ್ತಡ ಕೊನೆಯಿಲ್ಲದಂತಿದೆ." ಅದು ಅಕ್ಷರಶಃ ನಿಜ. **ಆದರೆ ಈ ಮೂವರು ಮಹಿಳೆಯರು ಮತ್ತು ಅವರಂತೆ ಮಂಡ್ಯ ಜಿಲ್ಲೆಯ ಇನ್ನೂ ಹಲವಾರು ಮಹಿಳೆಯರು ಇಂಥ ಪರಿಸ್ಥಿತಿಗಳಿಂದ ಹತಾಶರಾಗದೆ, ಕಷ್ಟಗಳಿಗೆ ಎದೆಯೊಡ್ಡಿ, ತಮ್ಮ ಬೇಸಾಯ ವೃತ್ತಿಯನ್ನು ನಡೆಸುತ್ತ, ತಮ್ಮ ಕುಟುಂಬವನ್ನು ಪೋಷಿಸುತ್ತ, ತಮ್ಮ ಕುಟುಂಬದವರೆಲ್ಲ, ಸಮಾಜದಲ್ಲಿ, ಎಲ್ಲರ ಮುಂದೆ ಗೌರವದಿಂದ ತಲೆಯೆತ್ತಿ ಬದುಕುವಂತೆ ಮಾಡುತ್ತಿದ್ದಾರೆ.**

(ಕೃಪೆ: 'ದಿ ಹಿಂದೂ')

ಚಾಮರಾಜನಗರ ಜಿಲ್ಲೆಯ *ನಾಯಕರ ಬಡಾವಣೆ* ಎಂಬ ಗ್ರಾಮದಲ್ಲಿ, ಗ್ರಾಮಸ್ಥರು ಬಡತನದ ಬವಣೆ ತಾಳಲಾರದೆ, ತಮ್ಮ ರೇಷನ್ ಕಾರ್ಡುಗಳನ್ನು ಒತ್ತೆಯಿಟ್ಟು ಲೇವಾದೇವಿಯವರಿಂದ ಸಾಲ ಪಡೆಯುತ್ತಿದ್ದಾರೆ. ಸಾಲದ ಮೊತ್ತವಾದರೋ ೫೦೦ ರೂಪಾಯಿಗಳಷ್ಟು ಕಡಿಮೆ ಮತ್ತು ಅದನ್ನು ತೀರಿಸಲಾಗದ ಪರಿಸ್ಥಿತಿಯಲ್ಲಿ ರೇಷನ್ ಕಾರ್ಡು ಸಾಲಕೊಟ್ಟವರ ಹತ್ತಿರವೇ ಉಳಿಯುತ್ತದೆ. ಹೀಗಾಗಿ ಆ ಬಡ ಕುಟುಂಬಗಳಿಗೆ ದಕ್ಕಬೇಕಾಗಿದ್ದ ಕಡಿಮೆದರದ ಧಾನ್ಯಪದಾರ್ಥಗಳು ಶ್ರೀಮಂತರ ಪಾಲಾಗುತ್ತಿವೆ ಮತ್ತು ಇದರಿಂದಾಗಿ ಪಡಿತರ ವ್ಯವಸ್ಥೆಯ ಆಶಯಕ್ಕೇ ಧಕ್ಕೆ ಬಂದಂತಾಗಿದೆ.

ಇತ್ತೀಚೆಗೆ ಸರ್ಕಾರ ಬಿ.ಪಿ.ಎಲ್. ಕಾರ್ಡುದಾರರ ಹೆಸರುಗಳನ್ನು ಕಂಪ್ಯೂಟರೀಕರಣ ಮಾಡಿತು. ಅದರಲ್ಲಿ ನೂರಾರು ಜನರ ಹೆಸರುಗಳು ಬಿಟ್ಟುಹೋಗಿ ಅವರೆಲ್ಲರೂ ಅತಂತ್ರರಾಗಿದ್ದಾರೆ. ಮುಕ್ತ ಮಾರುಕಟ್ಟೆಯಲ್ಲಿ ಅತಿ ಹೆಚ್ಚಿನ ಬೆಲೆಗೆ ದವಸಧಾನ್ಯ ಕೊಳ್ಳಲಾಗದೆ ಪರಿತಾಪ ಪಡುತ್ತಿದ್ದಾರೆ.

**(ಆಧಾರ: *ದಿ ಟೈಮ್ಸ್ ಆಫ್ ಇಂಡಿಯಾ* –ನವೆಂಬರ್ ೧೧, ೨೦೦೭)**